OS No.55/2024
PW-1

**(ಇಂದು ದಿಃ 04-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮುಂದುವರೆದ ಪಾಟೀ ಸವಾಲುಃ- ಶ್ರೀ.HSR ವಕೀಲರಿಂದಃ-**

ನಾನು SSLC ರವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ನಾನು SSLC ನಂತರ ಕಲಬುರಗಿಯ ಖಾದಿ ಬಂಡಾರದಲ್ಲಿ ಕೆಲಸ ಮಾಡುತ್ತಿದ್ದೆ. ಅಲ್ಲಿ 2 ವರ್ಷ ಕೆಲಸ ಮಾಡಿದ್ದೇನೆ. 1994 – 95 ರಲ್ಲಿ ಅಲ್ಲಿ ಕೆಲಸ ಮಾಡಿದ್ದೇನೆ. ಕೆಲಸ ಬಿಟ್ಟ ನಂತರ ಕೋಲಕುಂದದ ನಮ್ಮ ಮನೆಯಲ್ಲಿ ವಾಸವಿದ್ದೆ. 20 ವರ್ಷಗಳ ಕಾಲ ಕೋಲಕುಂದದ ಮನೆಯಲ್ಲಿ ವಾಸವಿದ್ದೆ. ಕೆಲಸ ಬಿಟ್ಟ ನಂತರ 2002 ರವರೆಗೆ ಅಲ್ಲಿ ವಾಸವಿದ್ದೆ ಅದು ಆದ ನಂತರ ನನ್ನ ಮಗ ತೀರಿ ಹೋದ ಕಾರಣಕ್ಕೆ 2 ವರ್ಷಗಳ ಕಾಲ ಬೆಂಗಳೂರಿಗೆ ಹೋಗಿದ್ದೆ. ಇವತ್ತಿಗೂ ಬೆಂಗಳೂರಿನಲ್ಲಿ ವಾಸವಿದ್ದೇನೆ. ನಾನು ಸರ್ವೆ ನಂ.219 ಕ್ಕೆ ಈ ದಾವೆ ಸಲ್ಲಿಸಿದ್ದೇನೆ. ದಾವಾ ಜಮೀನು 16 ಎಕರೆ 34 ಗುಂಟೆ ಇದೆ. ದಾವಾ ಸ್ವತ್ತಿನ ಪೂರ್ವಕ್ಕೆ ಇರುವ ಮಾಲೀಕರ ಹೆಸರು ಗೊತ್ತಿಲ್ಲ . ಸಾಕ್ಷಿ ಮುಂದುವರೆದು ಮೊದಲನೇ ಮಾಲೀಕರು ತೀರಿ ಹೋಗಿದ್ದು , ಆಗಾಗಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಸ್ವತ್ತಿನ 4 ಬದಿಯಲ್ಲಿ ಜಮೀನು ಹೊಂದಿರುವ ವ್ಯಕ್ತಿಗಳ ಹೆಸರುಗಳು ನನಗೆ ಗೊತ್ತಿಲ್ಲ. ನನಗೆ ಕನ್ನಡ ಮತ್ತು ಇಂಗ್ಲೀಷ ಓದಲು ಬರುತ್ತದೆ. ಸರ್ವೇ ನಂಬರ 219 ರ ಜಮೀನನ್ನು ನಿಂಗಪ್ಪನ ಕುಂಟಿ ಹೊಲ ಎಂದು ಕರೆಯುತ್ತಾರೆ ಎಂದರೆ ಸರಿ. ನಿಪಿ-28 ರಲ್ಲಿ ನಿಂಗಪ್ಪನ ಕುಂಟ್ಟಿ ಹೊಲ ಅಣಾದಿಯಿಂದ ಮೆಹಿಷಮ್ಮ ವರೆಗೆ ನನಗೆ ನೀಡಿದ್ದಾರೆ ಎಂದು ಬೆರಯಲಾಗಿದೆ ಎಂದರೆ ಸರಿ. ಅಣಾದಿಯಿಂದ ಮೆಷಪ್ಪನವರೆಗೆ ಎಷ್ಟು ಅಳತೆ ನನಗೆ ಗೊತ್ತಿಲ್ಲ. ನಿಂಗಪ್ಪನ ಕುಂಟಿಯಲ್ಲಿ ಮಾಷಮರಿಂದ ಪೂರ್ತಿ ಮುಷ್ಟಳ್ಳಿ ವರೆಗೆ 16 ಎಕರೆ ಆಗುತ್ತದೆ ಅದರಲ್ಲಿ 4 ಎಕರೆ 5 ಗುಂಟೆ ನನಗೆ ಕೊಟ್ಟಿದ್ದಾರೆ. ನನಗೆ ಇಂಗ್ಲೀಷ ಓದಲು ಸ್ವಲ್ಪ ಸ್ವಲ್ಪ ಬರುತ್ತದೆ.

ಅಸಲು ದಾವಾ ನಂಬರ 124/1999 ರಲ್ಲಿ ದಾವೆ ವಜಾ ಆಗಿದೆ ಎಂದು ಉಲ್ಲೇಖ ಇದೆ ಎಂದರೆ ಸರಿ. ನಾನು RA No. 31/2016 ನ್ನು ಉದಯಕುಮಾರು ಸಲ್ಲಿಸಿದ್ದರು ಎಂದರೆ ಸರಿ.ಸದರಿ ಅಪೀಲು ಮಂಜೂರು ಆಗಿದೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ದವಾ ಜಮೀನಿನಲ್ಲಿ ನಾನು ಕಬ್ಜಾದಲ್ಲಿದ್ದೇನೆ ಮತ್ತು ನನಗೆ ಬರುತ್ತದೆ ಎಂದು ಪೂರ್ತಿ ತೀರ್ಪಿನಲ್ಲಿ ಎಲ್ಲಿಯೂ ಬರೆದಿಲ್ಲ ಎಂದರೆ ಸರಿ. ಆದೆರ ನಾನು ಸುಳ್ಳು ಸೃಷ್ಟಿ ಮಾಡಿ ಈ ದಾವೆ

ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-23 ರಲ್ಲಿ ವೇಂಕಟರಾವ ಹೆಸರು ಹೊಡೆದು ಹಾಕಿ ಉದಯಕುಮಾರ ಹೆಸರು ಮುಟೇಷನ್ ಆಗಿದೆ ಎಂದರೆ ಸಾಕ್ಷಿ ವೇಂಕಟರಾವ ಗ್ರಾಮ ಲೆಕ್ಕಧಿಕಾರಿ ಆಗಿದ್ದರು ಅದಕ್ಕೆ ಅವರು ಆ ರೀತಿ ಮುಟೇಷನ್ ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ನನ್ನ ತಂದೆ ಭೀಮರಾವರವರಿಗೆ ಇಬ್ಬರು ಗಂಡು ಮಕ್ಕಳು. ಮಾಣೀಕರಾವ ಭೀಮರಾವ್. ವೇಂಕಟರಾವ ಕೂಡ ಭೀಮರಾವರವರು ಮಗ . ವೇಂಕಟರಾವ ಮನೆಯ ಅಳಿಯತನಕ್ಕೆ ಹೋಗಿದ್ದಾರೆ. ವೇಂಕಟರಾವನ ಮಾವ ಗುಂಡೆರಾವ. ವೇಂಕಟರಾವ ನ ತಂದೆ ಭೀಮರಾವ್. ವೇಂಕಟರಾವ ಮನೆಯ ಅಳಿಯತನಕ್ಕೆ ಹೋಗಿದ್ದರಿಂದ ಗುಂಡೆ ರಾವ ಆಸ್ತಿಗಳನುನ ವೇಂಕಟರಾವನ ಮಕ್ಕಳಿಗೆ ಹಂಚಿಕೊಟ್ಟದ್ದಾರೆ ಎಂದರೆ ಸಾಕ್ಷಿ ಭೀಮರಾವ ಮತ್ತು ಗುಂಡೆ ರಾವ್ ರವರ ಆಸ್ತಿಗಳನುನ ಸೇರಿಸಿ ಭಾಗ ಮಾಡಿದ್ದಾರೆ ಎಂದು ಹೇಳುತ್ತಾರೆ. ಆ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ಬೇರೆ ಕೇಸಿನಲ್ಲಿ ಹಾಜರು ಪಡಿಸಿದ್ದೇನೆ ಎಂದು ಹೇಳುತ್ತಾರೆ. ಭೀಮರಾವ ನ ಆಸ್ತಿ ಬೇರೆ ಮತ್ತು ಗುಂಡು ರಾವನ ಆಸ್ತಿ ಬೇರೆ ಎಂದರೆ ಸರಿಯಲ್ಲ. ಗುಂಡುರಾವ ರವರು ವೇಂಕಟರಾವ ಮನೆಯ ಅಳಿಯನಾಗಿ ಬಂದಿದ್ದ ಕಾರಣ ವೇಂಕಟರಾವನ ಮಕ್ಕಳಿಗೆ ಆಸ್ತಿ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳಲ್ಲಿ ವೇಂಕಟರಾವನ ಮಕ್ಕಳು ಮಾತ್ರ ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ಭೀಮರಾವನ ಆಸ್ತಿಗಳಿಗೂ ಮತ್ತು ಗುಂಡು ರಾವನ ಆಸ್ತಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಭೀಮರಾವನ ಆಸ್ತಿಗಳು ಮತ್ತು ಗುಂಡುರಾವನ ಆಸ್ತಿಗಳು ಒಂದು ಕಡೆ ಇದ್ದವು ಎಂದು ತೊರಿಸಲು ಈ ದಾವೆಯಲ್ಲಿ ದಾಖಲಾತಿ ಹಾಜರುಪಡಿಸಿಲ್ಲ. ನನಗೂ ಮತ್ತು ಗುಂಡುರಾವನ ಆಸ್ತಿಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವೇಂಕಟರಾವನ ಭಾಗಕ್ಕೆ ಬಂದ ಜಮೀನುಗಳಲ್ಲಿ ಆತನ ಮಕ್ಕಳು ಸ್ವಾ ದೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ವೇಂಕಟರಾವನ ಮಕ್ಕಳು ಅವರ ತಾತ ಜಭೀಮರಾವನಿಂದ ಅವರ ತಂದೆ ವೇಂಕಟರಾವನಿಗೆ ಬಂದ ಸ್ವತ್ತುಗಳಲ್ಲಿ ಕೂಡ ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ಸರ್ವೇ ನಂಬರ 219 ರ ಜಮೀನಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಅಣ್ಣನ ಮಕ್ಕಳಿಗೆ ತೊಂದರೆ ಕೋಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಭಾಗಕ್ಕೆ ಬಂದ ಆಸ್ತಿಗಳನ್ನು ನಾನು ಮಾರಾಟ ಮಾಡಿದ್ದೇನೆ ಎಂದರೆ

ಸರಿಯಲ್ಲ, ನನ್ನ ದಾವೆಯಲ್ಲಿ ನನಗೆ ಬಂದ ಆಸ್ತಿಗಳು ಯಾವವು ಎಂದು ಬರೆದಿಲ್ಲ ಎಂದರೆ ಸರಿಯಲ್ಲ,

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**